40 Karnataka Throwball Association,
41 Karnataka Volleyball Association,
42 Karnataka Veterns Athletic Association,
43 Karnataka Wrestling Association,
44 Karnataka Weight Lifters Association,
45 Karnataka Yoga Association,
46 Karnataka Tug-of-War Association,
47 Karnataka Sepak Takrew Association,
48 Karnataka Tae Know Do Association,
49 Karnataka Mallakhamba Association,
50 Karnataka State Baseball Association,
51 Karnataka Rowing Association.

ಶ್ರೀ ಎ. ಬಿ. ದೇಸಾಯಿ.—ಗ್ರಾಮೀಣ ಪ್ರದೇಶದ ಸಂಸ್ಥೆಗಳಿಗೆ ತಾವು ಎಷ್ಟು ಧನಸಹಾಯ ಮಾಡಿದ್ದೀರಿ ?

ಶ್ರೀ ರಮೇಶ್ ಜಿಗಜಿಣಗಿ.—ಆ ವಿವರ ನನ್ನ ಬಳಿ ಇಲ್ಲ. ಮಾನ್ಯ ಸದಸ್ಯರಿಗೆ ತರಿಸಿ ಕೊಡುತ್ತೇನೆ.

ಅಧ್ಯಕ್ಷರು.—ಶ್ರೀ ಗಂರುಪಾದಪ್ಪನವರ ಪ್ರಶ್ನೆಯನ್ನು ಲೋಕೋಪಯೋಗಿ ಇಲಾಖೆಗೆ ವರ್ಗಾಯಿಸಲಾಗಿದೆ. ಹಾಗೆಯೇ ಶ್ರೀ ಡಿ. ಟಿ. ಜಯಕುಮಾರ್ ಅವರು ಗೈರುಹಾಜರಿದ್ದಾರೆ.

ಹಳ್ಳಿಗಳಲ್ಲಿ ರಾಷ್ಟ್ರೀಯ ಗ್ರಾಮೀಣ ನೀರು ಸರಬರಾಜು ಯೋಜನೆ

೧೫೭೨. ಶ್ರೀ ಜಿ. ರಾಜುಗೌಡ (ಹುಣಸೂರು).— ಮಾನ್ಯ ಗ್ರಾಮೀಣ ಅಭಿವೃದ್ಧಿ ಪಂಚಾಯತ್ ರಾಜ್ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಎರಡು ಸಾವಿರಕ್ಕಿಂತ ಹೆಚ್ಚಿನ ಜನಸಂಖ್ಯೆಯಿರುವ ಹಳ್ಳಿಗಳ ಸಂಖ್ಯೆ ಎಷ್ಟು?

ಆ) ಇವುಗಳ ಪೈಕಿ ಇದುವರೆಗೆ ಎಷ್ಟು ಹಳ್ಳಿಗಳಲ್ಲಿ ರಾಷ್ಟ್ರೀಯ ಗ್ರಾಮೀಣ ನೀರು ಸರಬರಾಜು (ಎಆರ್‌ಡಬ್ಲ್ಯೂಎಸ್) ಯೋಜನೆ ಕೈಗೊಳ್ಳಲಾಗಿದೆ?

ಇ) ಉಳಿದ ಹಳ್ಳಿಗಳಿಗೆ ಯಾವಾಗ ನೀರು ಸರಬರಾಜು ಪೂರೈಸಲಾಗುವುದು, ಹಾಗೂ ಈ ಕಾರ್ಯಕ್ಕೆ ತಗಲುವ ವೆಚ್ಚವೆಷ್ಟು?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣ ಅಭಿವೃದ್ಧಿ ಪಂಚಾಯತ್ ರಾಜ್ ಮತ್ತು ವಕ್ಫ್ ಮಂತ್ರಿಗಳು).—

ಅ) ೨೧೮೪.

ಆ) ಎಆರ್‌ಡಬ್ಲ್ಯೂಎಸ್ ಮತ್ತು ಎನ್ ಆರ್‌ಡಬ್ಲ್ಯೂಎಸ್ ಯೋಜನೆಗಳಡಿಯಲ್ಲಿ ಇದುವರೆಗೂ ೧೦೧೧ ಹಳ್ಳಿಗಳಿಗೆ ನೀರು ಸರಬರಾಜು ಮಾಡಲಾಗಿದೆ. ಮತ್ತು ೫೯೯ ಹಳ್ಳಿಗಳಲ್ಲಿ ನೀರು ಸರಬರಾಜು ಯೋಜನೆ ನಡೆಯುತ್ತಿದೆ. ಚಾಲ್ತಿ ವರ್ಷದಲ್ಲಿ ೩೦೦ ಯೋಜನೆಗಳನ್ನು ತೆಗೆದುಕೊಳ್ಳಲಾಗುವುದು.

ಇ) ಉಳಿದ ೨೭೪ ಹಳ್ಳಿಗಳಿಗೆ ೧೯೯೧-೯೨ರೊಳಗೆ ನೀರು ಸರಬರಾಜು ಯೋಜನೆಗಳನ್ನು ಪೂರೈಸುವ ನಿರೀಕ್ಷೆ ಇದೆ, ಇದಕ್ಕೆ ತಗಲುವ ವೆಚ್ಚ ಸುಮಾರು ೩೨.೦೦ ಕೋಟಿ ರೂಪಾಯಿಗಳು.

ಶ್ರೀ ಜಿ. ರಾಜಂಗೌಡ.— ಈ ರಾಜ್ಯದಲ್ಲಿ ಎಲ್ಲೆಲ್ಲಿ ೨೦೦೦ ಜನಸಂಖ್ಯೆ ಇದೆಯೋ ಅಂತಹ ಹಳ್ಳಿಗಳಿಗೆ ೧೯೮೮-೮೯ರ ಒಳಗೆ ಕೊಳವೆ ಬಾವಿಗಳ ಮೂಲಕ ಕುಡಿಯುವ ನೀರನ್ನು ಒದಗಿಸಿಕೊಡುತ್ತೇವೆಂದು ಆಶ್ವಾಸನೆಯನ್ನು ತಾವು ಕೊಟ್ಟಿದ್ದೀರಿ. ಆದರೆ, ೧೯೮೭-೮೮ಕ್ಕೆ ಈ ಕಾರ್ಯವನ್ನು ಮಾಡಿ ಮುಗಿಸುತ್ತೇವೆಂದು ಹೇಳುತ್ತಿದ್ದೀರಿ, ಇದರ ಕಾರ್ಯ-ವೈಖರಿ ಸರಿಯಲ್ಲವೆಂದು ಇವತ್ತು ನಾನಂ ಹೇಳ ಬೇಕಾಗಿದೆ. ಇದನ್ನು ಆದಷ್ಟು ಬೇಗ ಮುಗಿಸಬೇಕು. ಕೇಂದ್ರ ಸರಕಾರ ಎಆರ್‌ಡಬ್ಲ್ಯೂಎಸ್‌ನಲ್ಲಿ ಹಣವನ್ನು ಏನು ಕೊಡುತ್ತದೆ ಅದನ್ನು ರಾಜ್ಯದವರು ಸರಿಯಾಗಿ ಉಪಯೋಗಿಸಿಕೊಂಡಿಲ್ಲ. ಅದರಲ್ಲಿ ವಿಫಲತೆಯನ್ನು ಹೊಂದಿದ್ದೀರಿ ಎಂದು ನಾನು ಹೇಳುತ್ತಿದ್ದೇನೆ ಇದನ್ನು ತಾವು ಒಪ್ಪಿಕೊಳ್ಳುತ್ತೀರಾ?

ಶ್ರೀ ಅಬ್ದುಲ್ ನಜೀರ್‌ಸಾಬ್. — ೧೯೮೮-೮೯ಕ್ಕೆ ಕುಡಿಯುವ ನೀರನ್ನು ಒದಗಿಸುತ್ತೇನೆಂದೆ ಆಶ್ವಾಸನೆಯನ್ನು ನಾನು ಕೊಟ್ಟಿರಲಿಲ್ಲ. ಚುನಾವಣಾ ಪ್ರಣಾಳಿಕೆಯಲ್ಲಿ ಎರಡು ಸಾವಿರ ಜನಸಂಖ್ಯೆಯುಳ್ಳ ಎಲ್ಲಾ ಹಳ್ಳಿಗಳಿಗೂ ನಮ್ಮ ಆಡಳಿತಾವಧಿಯಲ್ಲಿ ನೀರು ಕೊಡುತ್ತೇವೆಂದು ಭರವಸೆಯನ್ನು ಕರ್ನಾಟಕ ಜನತೆಗೆ ಕೊಟ್ಟಿವು. ೧೯೮೭-೮೮, ೧೯೮೮-೮೯ನೇ ಇಸವಿಗೆ ಪೂರ್ಣವಾಗತಕ್ಕಂತಹ ಎಲ್ಲಾ ಯೋಜನೆಗಳನ್ನು ಮಂಜೂರಾತಿ ಕೊಟ್ಟಿದ್ದೇವೆ. ಮುಂದಿನ ವರ್ಷ ೨೫೦ ಯೋಜನೆಗಳನ್ನು ತೆಗೆದು ಕೊಳ್ಳುತ್ತೇವೆ. ಇದಕ್ಕೆ ಮೂರು ವರ್ಷದ ಕಾಲಾವಧಿಯನ್ನು ಇಟ್ಟುಕೊಂಡಿರುತ್ತೇವೆ. ಮೂರನೇ ಒಂದು ಭಾಗದಷ್ಟು ಹಣದ ಪ್ರಾವಿಜನ್ ಮಾಡಿ ಮಂಜೂರಾತಿ ಕೊಟ್ಟಿರುತ್ತೇವೆ. ಈ ವರ್ಷ ೩೦೦ ಯೋಜನೆಗಳನ್ನು ತೆಗೆದುಕೊಂಡಿದ್ದೇವೆ. ಇನ್ನು ೨೦೦ ಹಳ್ಳಿಗಳು ಉಳಿದಿವೆ. ಅವೆಲ್ಲಕ್ಕೂ ಕೂಡ ಅಂದರೆ ನಾವು ಮತ್ತೆ ಚುನಾವಣೆಗೆ ಹೋಗುವುದಕ್ಕೆ ಮುಂಚೆ ನೀರನ್ನು ಕೊಡಲು ಬದ್ಧವಾಗಿದ್ದೇವೆ. ಇನ್ನು ಎಆರ್‌ಡಬ್ಲ್ಯೂಎಸ್‌ಅನ್ನು ಬಳಸಿಕೊಂಡಿಲ್ಲವೆಂದು ಹೇಳಿದ್ದೀರಿ. ಇದು ಸತ್ಯಕ್ಕೆ ದೂರವಾದ ಮಾತು. ನನ್ನ ಇಲಾಖೆಯ ಬೇಡಿಕೆ ಚರ್ಚೆಗೆ ಬಂದಾಗ ನಾನು ವಿವರವಾದ ಉತ್ತರವನ್ನು ಕೊಡುತ್ತೇನೆ.

ಶ್ರೀ ಜಿ. ರಾಜುಗೌಡ.— ಕಿರಿ ಚುನಾವಣಾ ಪ್ರಣಾಳಿಕೆಯಲ್ಲಿ ೨,೦೦೦ ಜನಸಂಖ್ಯೆಯಿರುವ ಹಳ್ಳಿಗಳಿಗೆ ೧೯೯೦ರ ಹೊತ್ತಿಗೆ ನೀರನ್ನು ಒದಗಿಸಿಕೊಡುತ್ತೇವೆಂದು ತಾವು ಆಶ್ವಾಸನೆಯನ್ನು ಕೊಟ್ಟಿದ್ದೀರಿ.

ಶ್ರೀ ಅಬ್ದುಲ್ ನಜೀರ್ ಸಾಬ್.— ಎರಡು ಸಾವಿರ ಜನಸಂಖ್ಯೆಯಿರುವ ಹಳ್ಳಿಗಳಿಗೆ ನೀರನ್ನು ಒದಗಿಸುತ್ತೇವೆಂದು ೧೯೮೫ರ ಚುನಾವಣಾ ಪ್ರಣಾಳಿಕೆಯಲ್ಲಿ ಆಶ್ವಾಸನೆ ಕೊಟ್ಟಿದ್ದೇವೆ. ಅದನ್ನು ನೆರವೇರಿಸುತ್ತೇವೆ.

ಶ್ರೀ ಜಿ. ರಾಜುಗೌಡ.— ಚಾಲ್ತಿ ವರ್ಷದಲ್ಲಿ ೩೦೦ ಯೋಜನೆಗಳನ್ನು ತೆಗೆದುಕೊಂಡಿದ್ದೇವೆಂದು ಹೇಳುತ್ತಿದ್ದೀರಿ ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಹಳ್ಳಿಗಳಲ್ಲಿ ತೆಗೆದುಕೊಂಡಿದ್ದೀರಿ ಎಂಬುದನ್ನು ತಿಳಿಸುತ್ತೀರಾ?

ಶ್ರೀ ಅಬ್ದುಲ್ ನಜೀರ್ ಸಾಬ್ — ನನ್ನ ಹತ್ತಿರ ಆ ಮಾಹಿತಿ ಇಲ್ಲ ಬಡ್ಜೆಟ್ ಪುಸ್ತಕದಲ್ಲಿ ಎಲ್ಲ ವಿವರಗಳಿವೆ.

ಶ್ರೀ ಜಿ. ರಾಜುಗೌಡ.— ೧೯೮೮-೮೯ರ ಆಯವ್ಯಯ ಪತ್ರದಲ್ಲಿ ಹಾಲಿ ನಡೆಯುತಕ್ಕಂತಹ ನೀರಾವರಿ ಯೋಜನೆಗಳಿಗೆ ಎಷ್ಟು ಹಣವನ್ನು ಇಟ್ಟಿದ್ದೀರಿ?

ಶ್ರೀ ಅಬ್ದುಲ್ ನಜೀರ್ ಸಾಬ್.— ಬಡ್ಜೆಟ್ ಪ್ರಾವಿಜನ್ ಇಲ್ಲದೇ ಮೂರನೇ ಒಂದು ಭಾಗ ಎಸ್ಟಿಮೇಟ್ ಕಾಸ್ಟ್ ಅನ್ನು ಅದರಲ್ಲಿ ಸೇರಿಸುವುದಕ್ಕಾಗುವುದಿಲ್ಲ. ಮೂರನೇ ಒಂದು ಭಾಗದಷ್ಟು ಹಣವನ್ನು ಈ ೩೦೦ ಯೋಜನೆಗಳಿಗೆ ಕೊಟ್ಟಿದ್ದೇವೆ.

ಶ್ರೀ ಬಾಬುರೆಡ್ಡಿ ವಿ. ತಂಗಳ್.— ಮಾನ್ಯ ರಾಜುಗೌಡರಿಗೆ ಉತ್ತರ ಕೊಡುವಾಗ ೨೦೦೦ ಜನಸಂಖ್ಯೆಯಿರುವ ಹಳ್ಳಿಗಳು ಎಷ್ಟು ಇವೆ ಅವುಗಳಲ್ಲಿ ಎಷ್ಟು ಹಳ್ಳಿಗಳಿಗೆ ನೀರು ಒದಗಿಸಲಾಗಿದೆ ಎಂದು ಹೇಳಿದಿರಿ. ನಮ್ಮ ಬೀಳಗಿ, ಜಮಖಂಡಿ ತಾಲ್ಲೂಕಿನ ೩೬ ಹಳ್ಳಿಗಳಿಗೆ ಮಿನಿ ವಾಟರ್ ಸಪ್ಲೈ ಸ್ಕೀಮ್‌ನಲ್ಲಿ ಎರಡು ಲಕ್ಷ ರೂಪಾಯಿ ಹಣವನ್ನು ೧೯೮೭ರಲ್ಲಿ ಕೊಟ್ಟಿದ್ದರಂ ಆದರೆ ಅದರಲ್ಲಿ ೧೬ ಸಾವಿರ ರೂಪಾಯಿಗಳನ್ನು ಮಾತ್ರ ಅಲ್ಲಿರುವಂತಹ ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಇಂಜಿನಿಯರ್‌ರವರಂ ಖರ್ಚು ಮಾಡಿದ್ದಾರೆ. ರೆಗ್ಯುಲರ್ ವಾಟರ್ ಸಪ್ಲೈ ಸ್ಕೀಮ್‌ನಲ್ಲಿ ೨೬ ಲಕ್ಷ ಇದ್ದರೆ ಕೇವಲ ೬ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇನ್ನು ೮೮ರಲ್ಲಿ ಏನು ಕಾರ್ಯಕ್ರಮ ಕೈಗೊಳ್ಳುತ್ತಾರೋ

ಗೊತ್ತಿಲ್ಲ. ತಾವು ಕೊಟ್ಟಂತಹ ಹಣವನ್ನು ಖರ್ಚು ಮಾಡಿರುವಂತಹ ಆಲಸಿ ಅಧಿಕಾರಿಗಳ ವಿರುದ್ಧ ಯಾವ ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದನ್ನು ತಿಳಿಸುತ್ತೀರಾ?

ಶ್ರೀ ಅಬ್ದುಲ್ ನಜೀರ್ ಸಾಬ್.— ತಾವು ಬೇರೆ ಪ್ರಶ್ನೆಯನ್ನು ಪ್ರತ್ಯೇಕವಾಗಿ ಕೇಳಿದರೆ ಉತ್ತರ ಹೇಳುತ್ತೇನೆ.

ಶ್ರೀ ಯು. ಭೂಪತಿ.— ಈ ಎರಡು ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆಯಿರುವಂತಹ ಹಳ್ಳಿಗಳ ಬಗ್ಗೆ ಮಾನ್ಯ ಸಚಿವರು ಉತ್ತರಕೊಟ್ಟಿದ್ದಾರೆ. ಅದರೆ ಅದಕ್ಕಿಂತ ಕಡಿಮೆ ಜನಸಂಖ್ಯೆಯಿರುವಂತಹ ಹಳ್ಳಿಗಳಿಗೆ ಕುಡಿಯುವ ನೀರಿನ ಯೋಜನೆ ಏನಾದರೂ ಹಾಕಿಕೊಂಡಿದ್ದೀರಾ? ತಮ್ಮ ಅಂದಾಜು ಪ್ರಕಾರ ಇಂತಹ ಹಳ್ಳಿಗಳು ಎಷ್ಟು ಇವೆ ಎಂದು ತಿಳಿಸಿ. ಮಿನಿ ವಾಟರ್ ಸಪ್ಲೈ ಸ್ಕೀಮ್‌ನಲ್ಲಿ ಮಿನಿಮಮ್ ೧೦೦೦ ಜನಸಂಖ್ಯೆಯಿರಬೇಕು. ಅದಕ್ಕಿಂತ ಕೆಳಗಡೆ ಇದ್ದರೆ ಬರುವುದಿಲ್ಲ. ೭೦೦-೮೦೦ ಜನಸಂಖ್ಯೆಯಿದ್ದರೆ ಬರುವುದಿಲ್ಲ. ಮುಂಖ್ಯವಾಗಿ ಬೋರ್‌ವೆಲ್‌ಗಳ ಮುಖಾಂತರವಾಗಿ ಕುಡಿಯುವ ನೀರನ್ನು ಸರಬರಾಜು ಮಾಡುತ್ತಿದ್ದೇವೆ. ಆದುದರಿಂದಾಗಿ ಈಗಾಗಲೇ ಕರ್ನಾಟಕ ರಾಜ್ಯದಲ್ಲಿ ಅಂತರ್‌ಜಲ ಬಹಳ ಕಡಿಮೆ ಯಾಗುತ್ತಿದೆ ಅದು ತೀರ ಕೆಳಗೆ ಹೋಗುತ್ತಿದೆ ಎಂದು ಸಂಬಂಧಪಟ್ಟ ಮಂತ್ರಿಗಳು ಮೊನ್ನೆ ಪಾರ್ಲಿಮೆಂಟಿ ನಲ್ಲಿ ಹೇಳಿದರು. ಅದರ ಬಗ್ಗೆ ಮುಂದೆ ಏನಾದರೂ ಕಾರ್ಯಕ್ರಮ ಹಾಕಿಕೊಳ್ಳುತ್ತೀರಾ?

ಶ್ರೀ ಅಬ್ದುಲ್ ನಜೀರ್ ಸಾಬ್.—ಸಭಾಧ್ಯಕ್ಷರೇ, ಕುಡಿಯುವ ನೀರನ್ನು ಸರಬರಾಜು ಮಾಡ ತಕ್ಕಂಥದ್ದು ಎಂದರೆ, ಕೊಳವೆ ಮುಖಾಂತರ ನೀರು ಸರಬರಾಜು ಮಾಡತಕ್ಕಂಥದ್ದು ಒಂದು ಸಣ್ಣ ಕೆರೆನೀರಿನ ಯೋಜನೆ ಮುಖಾಂತರ ಮಾಡತಕ್ಕಂಥದ್ದು ಒಂದು. ತೋಡುಬಾವಿಗಳ ಮತ್ತು ಕೊಳವೆ ಬಾವಿಗಳ ಮುಖಾಂತರ ನೀರು ಸರಬರಾಜು ಮಾಡತಕ್ಕಂಥದ್ದು. ಹಳ್ಳಕೊಳ್ಳಗಳಿಂದ ನೀರನ್ನು ಶುದ್ಧಿ ಮಾಡತಕ್ಕಂಥದ್ದು. ಈ ರೀತಿ ನಾನಾ ಯೋಜನೆಗಳನ್ನು ನಾವು ಮಾಡಿದ್ದೇವೆ, ಎಷ್ಟು ಬಟ್ಟಿ ಕಾಮಗಾರಿಗಳಾಗಿದೆ ಎಂದು ಈಗ ನನ್ನ ಹತ್ತಿರ ಒಂದೊಂದು ಗ್ರಾಮದ ಬಗ್ಗೆಯೂ ಮಾಹಿತಿ ಇಲ್ಲ. ಅದನ್ನು ಬೇಕಾದರೆ ಕಳುಹಿಸಿಕೊಡುತ್ತೇನೆ. ಮಾನ್ಯ ಸದಸ್ಯರು ಈ ಅಂತರ್‌ಜಲ ಕೆಳಗೆ ಹೋಗುತ್ತಿದೆ ಎಂದು ಹೇಳಿದರು, ಈ ಮಾತು ನಿಜ. ಆದರೆ ಇದು ಸರ್ವೇಸಾಧಾರಣವಾದ ಮಾತು. ಸರ್ವೇಸಾಧಾರಣವಾಗಿ ವೈಜ್ಞಾನಿಕವಾಗಿ ಆಗತಕ್ಕಂಥದ್ದೇ. ಬೇಸಿಗೆ ಕಾಲದಲ್ಲಿ ನೀರಿನ ಬಳಕೆ ಹೆಚ್ಚಿಗೆ ಆಗುತ್ತದೆ. ಆಗ ಜಲದ ಮೂಲ ಕೆಳಗೆ ಹೋಗುತ್ತದೆ. ಆತಂಕಕಾರಿ ಪರಿಸ್ಥಿತಿಯಲ್ಲಿ ಜಲದ ಮೂಲ ಕೆಳಗೆ ಹೋಗು ತ್ತಿಲ್ಲ. ನೀರಿನ ಕೊರತೆ ಎರಡು ಮೂರು ಜಿಲ್ಲೆಗಳಲ್ಲಿ ಬಿಟ್ಟರೆ ಬೇರೆಲ್ಲೂ ಇಲ್ಲ. ಆ ಜಿಲ್ಲೆಗಳು ಎಂದರೆ ಬೀದರ್, ತುಮಕೂರು ಮತ್ತು ಕೋಲಾರ. ಬಾಕಿ ಎಲ್ಲಾ ಕಡೆ ಅಂಥ ಭಯಂಕರವಾದ ಪರಿಸ್ಥಿತಿ ಏನೂ ಇಲ್ಲ. ಆದರೂ ಕೂಡಾ ಜಲದ ಮೂಲಗಳನ್ನು ಹೆಚ್ಚಿಸಬೇಕು ಎಂದು ಅದಕ್ಕಾಗಿ ನಾವು ನೀರನ್ನು ರೀ-ಛಾರ್ಜ್ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ ಮತ್ತು ಇದರ ಬಗ್ಗೆ ಅಧ್ಯ ಯನ ಕೂಡಾ ಮಾಡಿಸುತ್ತಿದ್ದೇವೆ.

ರಾಜ್ಯ ಸರ್ಕಾರವು ಪ್ರತಿ ಜಿಲ್ಲಾ ಪರಿಷತ್‌ಗಳಿಗೆ ಬಿಡುಗಡೆ ಮಾಡಿರುವ ಹಣ

೧೪೭೦. ಶ್ರೀ ಗೊಪಾಲ ಮಂಕಂಂದ ಕಾನಡೆ (ಸಿರ್ಸಿ).—ಮಾನ್ಯ ಗ್ರಾಮೀಣ ಅಭಿವೃದ್ಧಿ ಪಂಚಾಯತ್ ರಾಜ್ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿ ಸುವರೇ ?

ಅ) ರಾಜ್ಯ ಸರ್ಕಾರವು ಪ್ರತಿ ಜಿಲ್ಲಾ ಪರಿಷತ್‌ಗಳಿಗೆ ಇದುವರೆಗೆ ಬಿಡುಗಡೆ ಮಾಡಿರುವ ಹಣ ವೆಷ್ಟು ? (ವಿವರ ನೀಡುವುದು)

ಆ) ಪ್ರತಿ ಜಿಲ್ಲಾಪರಿಷತ್ತುಗಳಲ್ಲಿ ಹರಿಜನ ಗಿರಿಜನರಿಗೆ ವಿಂಗಡಿಸಲಾಗಿಟ್ಟಿರುವ ಹಣ ಎಷ್ಟು ? (ವಿವರ ನೀಡುವುದು)

ಇ) ಉತ್ತರ ಕನ್ನಡ ಜಿಲ್ಲಾ ಪರಿಷತ್‌ನಲ್ಲಿ ಈಕಡಾ ೧೮ರ ಪ್ರಕಾರ ಸಿರ್ಸಿ-ಪಿದ್ದಾಪುರ ತಾಲ್ಲೂಕು ಗಳಿಗೆ ಖರ್ಚು ಮಾಡಿರುವ ಹಣ ಎಷ್ಟು ? (ಜಿಲ್ಲೆಯ ವಿವರವನ್ನು ಸಹ ನೀಡುವುದು)